# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 191 |
| ಸದಸ್ಯರ ಹೆಸರು | ಡಾ: ತೇಜಸ್ವಿನಿ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.09.2021. |
| ಉತ್ತರಿಸುವ ಸಚಿವರು | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕನ್ನಡ ಭಾಷೆಯ ಉನ್ನತೀಕರಣಕ್ಕಾಗಿ ಕೈಗೊಂಡಿರುವ ಕ್ರಮಗಳೇನು;</td><td>ಕನ್ನಡ ಮತ್ತು ಸಂಸ್ಕೃತಿ ಇಲಾಖೆ:<br>1. ಭಾರತೀಯ ಭಾಷಾ ಸಂಸ್ಥಾನಕ್ಕೆ ಅನುದಾನ ನೀಡುವ ಮೂಲಕ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯನ್ನು ರೂಪಿಸಲಾಗಿದೆ ಹಾಗೂ ಆಸಕ್ತ ಕನ್ನಡ ಬಾರದವರಿಗೆ ಕನ್ನಡ ಕಲಿಕಾ ತರಬೇತಿಯನ್ನು ಸಂಸ್ಥೆಗಳ ಸಹಕಾರದೊಂದಿಗೆ ಏರ್ಪಡಿಸಲಾಗುತ್ತಿದೆ.<br>2. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ವಿವಿಧ ಲೇಖಕರ ಮೌಲಿಕ ಕೃತಿಗಳನ್ನು ಪ್ರಕಟಿಸಿದೆ.<br>3. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂಲಕ ರಾಜ್ಯದ ವಿವಿಧೆಡೆ ಹಲವಾರು ಕಮ್ಮಟ, ವಿಚಾರ ಸಂಕಿರಣ, ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿದೆ.<br><br>ಕನ್ನಡ ಅಭಿವೃದ್ಧಿ ಪ್ರಾಧಿಕಾರ:<br>ರಾಜ್ಯ ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನಕ್ಕಾಗಿ ಮತ್ತು ಡಾ|| ಸರೋಜಿನಿ ಮಹಿಷಿ ವರದಿಯ ಅಂಗೀಕೃತ ಶಿಫಾರಸ್ಸುಗಳನ್ನು ಜಾರಿಗೆ ತರಲು ಸರ್ಕಾರಕ್ಕೆ ಸಲಹೆ ನೀಡಲು ಹಾಗೂ ರಾಜ್ಯ ಸರ್ಕಾರದ ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಬಳಸುವಂತೆ ನೋಡಿಕೊಳ್ಳುವ ಸಲುವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.<br><br>ಕನ್ನಡ ಅಭಿವೃದ್ಧಿ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನದಲ್ಲಿ ಬೇರೆ ಬೇರೆ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಎಲ್ಲ ಸಂಸ್ಥೆಗಳು ಮತ್ತು ಸ್ಥಳೀಯ ನಿಕಾಯಗಳು ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸುತ್ತದೆ. ರಾಜ್ಯ ಸರ್ಕಾರ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ಸೇರಿದಂತೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಇರುವ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ.<br><br>ರಾಜ್ಯದಲ್ಲಿ ಹೆಚ್ಚು ಜನ ಸಂಪರ್ಕ ಹೊಂದಿರುವ ಕೇಂದ್ರ ಸರ್ಕಾರದ ಕಚೇರಿಗಳು, ಬ್ಯಾಂಕುಗಳು, ಅಂಚೆ ಕಚೇರಿಗಳು, ಮತ್ತಿತರ ಕಚೇರಿಗಳು ಮತ್ತು ಉದ್ಯಮಗಳಲ್ಲಿ ಕೇಂದ್ರ ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ, ಪ್ರಾದೇಶಿಕ ಭಾಷೆಯನ್ನು ಬಳಸಲಾಗುತ್ತದೆ ಎಂಬುದನ್ನು ಪರಿಶೀಲನೆ ನಡೆಸುತ್ತಿರುತ್ತದೆ.<br><br>ಕನ್ನಡ ಭಾಷೆಯ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಆಯವ್ಯಯದಲ್ಲಿ ವಾರ್ಷಿಕವಾರು ಒದಗಿಸುವ ಅನುದಾನಕ್ಕನುಸಾರವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.</td></tr>
</table>

.....2

**ಕನ್ನಡ ಮಾಧ್ಯಮ ಪ್ರಶಸ್ತಿ:** ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ರಾಜ್ಯ ಮತ್ತು ಹೊರರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ತರಗತಿಗಳಲ್ಲಿ ರಾಜ್ಯ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

**ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ:** ಹೊರ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳ ಎಂಟು ವಿಶ್ವವಿದ್ಯಾನಿಲಯಗಳ ಕನ್ನಡ ಅಧ್ಯಯನ ಪೀಠಗಳಲ್ಲಿ ಕನ್ನಡ ಎಂ.ಎ. ವ್ಯಾಸಂಗ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.25,000/-ಗಳಂತೆ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

**ನ್ಯಾಯಾಂಗದಲ್ಲಿ ಕನ್ನಡ ಪ್ರಶಸ್ತಿ:** ನ್ಯಾಯಾಲಯಗಳಲ್ಲಿ ಕನ್ನಡ ಬಳಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಸಂಪೂರ್ಣವಾಗಿ ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಾಧೀಶರು, ಕನ್ನಡದಲ್ಲಿ ವಾದ-ಪ್ರತಿವಾದ ಮಂಡಿಸಿದ ಸರ್ಕಾರಿ ಅಭಿಯೋಜಕರು ಹಾಗೂ ವಕೀಲರು ಸೇರಿದಂತೆ ಪುರಸ್ಕೃತರಿಗೆ ನ್ಯಾಯಾಂಗದಲ್ಲಿ ಕನ್ನಡ ಪ್ರಶಸ್ತಿ ನೀಡಿ ಗೌರವಿಸಿ ಪ್ರೋತ್ಸಾಹಿಸಲಾಗುತ್ತಿದೆ.

**ಪೀಠೋಪಕರಣ ಹಾಗೂ ಪಾಠೋಪಕರಣ:** ರಾಜ್ಯದಲ್ಲಿನ/ಗಡಿ ಭಾಗದಲ್ಲಿನ ಹಾಗೂ ಹೊರರಾಜ್ಯದಲ್ಲಿರುವ ಕನ್ನಡ ಶಾಲೆಗಳಿಗೆ ಕನ್ನಡ ಪುಸ್ತಕಗಳನ್ನು ಖರೀದಿಸಲು, ಕಪಾಟುಗಳನ್ನು ಹಾಗೂ ಅರ್ಹ ಶಾಲೆಗಳಿಗೆ ಪೀಠೋಪಕರಣಗಳ ಖರೀದಿ ಮತ್ತು ಅರ್ಹ ಕನ್ನಡ ಸಂಸ್ಥೆಗಳಿಗೆ ಪೀಠೋಪಕರಣ/ಕಪಾಟುಗಳು ಹಾಗೂ ಪಾಠೋಪಕರಣಗಳ ಖರೀದಿಗಾಗಿ ಪ್ರಾಧಿಕಾರದಿಂದ ಸಹಾಯಧನ ಮಾಡಲಾಗುತ್ತಿದೆ.

ಕನ್ನಡ ನಾಡು-ನುಡಿಗೆ ಸಂಬಂಧಿಸಿದಂತೆ ಹಲವಾರು ಪುಸ್ತಕ ಪ್ರಕಟಣೆಗಳನ್ನು ಹೊರತರಲಾಗಿದೆ. ಜನಪದ ಸಂಸ್ಕೃತಿಯನ್ನು ಬಿಂಬಿಸುವ ಹಲವು ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸಲಾಗಿದೆ.

**ಪ್ರಾಧಿಕಾರದ ಮಹತ್ವದ ಸಾಧನೆಗಳು:** ಆಡಳಿತ ವ್ಯವಸ್ಥೆಯಲ್ಲಿ ಮಾಹಿತಿ ತಂತ್ರಜ್ಞಾನದ ಅಭೂತ ಪೂರ್ವ ಪ್ರಾಶಸ್ತ್ಯದ ಇಂದಿನ ದಿನಗಳಲ್ಲಿ ಕನ್ನಡ ಭಾಷೆಯನ್ನು ಉಳಿಸುವ ಸಂಬಂಧ ತಜ್ಞ ಸಮಿತಿಯನ್ನು ರಚಿಸಿ, ಸರ್ಕಾರದ ಎಲ್ಲಾ ಜಾಲತಾಣಗಳಲ್ಲಿ ಕನ್ನಡ ಬಳಕೆಗೆ ಪ್ರಥಮ ಪ್ರಾಶಸ್ತ್ಯಗಳನ್ನು ಕಲ್ಪಿಸುವ ಕುರಿತಂತೆ ಪ್ರಾಯೋಗಿಕ ಶಿಫಾರಸ್ಸು ಮಾಡಿರುತ್ತದೆ. ಸದರಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯು ಸರ್ಕಾರದ ಇ-ಆಡಳಿತ ಇಲಾಖೆ, ಎಲ್ಲಾ ಸರ್ಕಾರಿ ಇಲಾಖೆಗಳ ಜಾಲತಾಣಗಳಲ್ಲಿ ಕನ್ನಡ ಬಳಕೆಗೆ ಮಾನದಂಡಗಳನ್ನು ಹೊರತರುವಲ್ಲಿ ಒತ್ತಡ ಹೇರಲಾಗಿದೆ. ಸರ್ಕಾರದ ಎಲ್ಲಾ ಇಲಾಖೆಗಳಿಗೆ ಭೇಟಿ ನೀಡಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಮಾಡಲಾಗುತ್ತಿದೆ.

ರಾಜ್ಯದ 500ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಅಂತರ್ ಜಾಲತಾಣಗಳಲ್ಲಿ ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕಲ್ಪಿಸಿರುವ ಕುರಿತಂತೆ ಪರಾಮರ್ಶೆ ನಡೆಸಲಾಗಿದೆ. ರಾಜ್ಯದ ಜಿಲ್ಲಾಡಳಿತಗಳಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಮಾಡಲಾಗಿದೆ. ಅಲ್ಲದೇ, ಸರ್ಕಾರದ ವಿವಿಧ ಇಲಾಖೆಗಳು, ನಿಗಮ-ಮಂಡಳಿಗಳ ಹಾಗೂ ಕೇಂದ್ರ ಸರ್ಕಾರದ ಕಾರ್ಖಾನೆಗಳು, ಕಚೇರಿಗಳು, ಬ್ಯಾಂಕ್ ಗಳಿಗೆ ಸಹ ಭೇಟಿ ನೀಡಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಮಾಡಲಾಗುತ್ತಿದೆ.

ಇಂದಿನ ಕಾಲಘಟಕ್ಕೆ ಅನ್ವಯಿಸುವ ರೀತಿಯಲ್ಲಿ ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಪರಿಷ್ಕೃತ ವರದಿಯನ್ನು ಕಳೆದ ಸಾಲಿನಲ್ಲಿ

| | | |
|---|---|---|
| | | ಸಲ್ಲಿಸಿದ್ದು, ಈ ವರದಿಯ ಪ್ರಮುಖ ಶಿಫಾರಸ್ಸಾದ ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಪ್ರಾತಿನಿಧ್ಯವನ್ನು 2017-18ನೇ ಸಾಲಿನ ಬಜೆಟ್ ಘೋಷಣೆಯಾಗಿ ಈ ಸಂಬಂಧ ಮಸೂದೆಯನ್ನು ಕಾರ್ಮಿಕ ಇಲಾಖೆ ಹೊರತರುವಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.<br><br>ಕೇಂದ್ರ ಸರ್ಕಾರದ ನಡೆಸುವ ಎಲ್ಲಾ ಮಾದರಿಯ ನೇಮಕಾತಿಗಳಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವಂತೆ ಕೇಂದ್ರ ಸರ್ಕಾರ ನಡೆಸುವ ಪರೀಕ್ಷೆಗಳನ್ನು ಸ್ಥಳೀಯ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡುವಂತೆ ಹಾಗೂ ರಾಜ್ಯದಲ್ಲಿರುವ ಕೇಂದ್ರ ಸ್ವಾಮ್ಯದ ಕಚೇರಿ/ಸಂಸ್ಥೆಗಳಲ್ಲಿ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಒದಗಿಸುವಂತೆ ನಿರಂತರವಾಗಿ ನಿಯೋಗಗಳ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುತ್ತಿದೆ.<br><br>ಅನ್ಯ ಭಾಷಿಕರಿಗೆ ಕನ್ನಡವನ್ನು ಕಲಿಸುವ ನಿಟ್ಟಿನಲ್ಲಿ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕನ್ನಡ ಕಲಿಕಾ ಕೇಂದ್ರಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿರ್ವಹಿಸಲು ಕ್ರಮವಹಿಸಿರುತ್ತದೆ. ಕರ್ನಾಟಕದಲ್ಲಿ ನೆಲೆಸಿರುವ ಕನ್ನಡೇತರರಿಗೆಂದೇ ವಿಶಿಷ್ಟ ಪಠ್ಯಕ್ರಮ ಹಾಗೂ ಹೊರದೇಶಗಳಲ್ಲಿನ ಕನ್ನಡೇತರರಿಗಾಗಿ ವಿಶಿಷ್ಟ ಪಠ್ಯಕ್ರಮಗಳನ್ನು ರೂಪಿಸಲಾಗಿದೆ. ಕನ್ನಡ ಭಾಷೆ ಸಂಸ್ಕೃತಿಯ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ ವಹಿಸಲಾಗುತ್ತಿದೆ.<br><br>ಕನ್ನಡ ಭಾಷಾ ಕಲಿಕಾ ಕಾಯ್ದೆ 2015 ರನುಸಾರ ವಿದ್ಯಾರ್ಥಿಗಳಿಗೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಎಲ್ಲಾ ಶಿಕ್ಷಣ ಸಂಸ್ಥೆಗಳು (ಐ.ಸಿ.ಎಸ್.ಇ., ಸಿ.ಬಿ.ಎಸ್.ಇ., ಐ.ಜಿ.ಸಿ.ಎಸ್.ಇ., ಪಠ್ಯಕ್ರಮದ ಶಾಲೆಗಳು ಒಳಗೊಂಡಂತೆ) ಕಲಿಸಬೇಕಾದ್ದು ಕಡ್ಡಾಯವಾಗಿದ್ದು, ಶಿಕ್ಷಣ ಇಲಾಖೆಯ ವತಿಯಿಂದ ಈ ನಿಯಮ ಅನುಷ್ಠಾನಕ್ಕೆ ಆದೇಶ ಹೊರಡಿಸುವಲ್ಲಿ ಯಶಸ್ವಿಯಾಗಿದೆ. ದಿ: 20.07.2017ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಈ ಕುರಿತಾದ ನಿಯಮಗಳನ್ನು ಸರ್ಕಾರದ ಅಧಿಸೂಚನೆಯ ಮೂಲಕ ಹೊರಡಿಸಿದೆ (ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ಇರಿಸಿದೆ).<br><br>ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಪ್ರತಿಯೊಬ್ಬ ಅಭ್ಯರ್ಥಿಗೆ ರಾಜ್ಯ ನಾಗರಿಕ ಸೇವಾ ಹುದ್ದೆಗಳ ನೇರ ನೇಮಕಾತಿಯಲ್ಲಿ ಶೇ.5ರ ಸಮತಳ ಮೀಸಲಾತಿ ಕಲ್ಪಿಸುವ ಆದೇಶ ಹೊರಡಿಸಿದೆ (ಆದೇಶದ ಪ್ರತಿಯನ್ನು ಅನುಬಂಧ-2 ರಲ್ಲಿ ಇರಿಸಿದೆ).<br><br>ಸಾಮಾಜಿಕ ವ್ಯವಸ್ಥೆಯ ಎಲ್ಲಾ ಆಯಾಮಗಳಲ್ಲಿ ಕನ್ನಡವನ್ನು ಉನ್ನತೀಕರಣಕ್ಕಾಗಿ/ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳವಾರು ಯೋಜನೆಗಳ ಮೂಲಕ ಕನ್ನಡ ಭಾಷೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಸಾಲಿನಲ್ಲಿ ಸಕ್ರಿಯ ಪಾತ್ರವನ್ನು ಎಂದಿನಂತೆ ನಿರ್ವಹಿಸಿದೆ. ಕನ್ನಡದ ಬಗೆಗಿನ ನಿರಂತರ ಬದ್ಧತೆಯನ್ನು ಸಮರ್ಥವಾಗಿ ಪ್ರದರ್ಶಿಸಿದೆ. |
| ಆ) | ಎಷ್ಟು ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡವನ್ನು ಮುಖ್ಯ ವಿಷಯವಾಗಿ ಅಧ್ಯಯನ ಮಾಡುತ್ತಿದ್ದಾರೆ; | ರಾಜ್ಯದ 22 ವಿಶ್ವವಿದ್ಯಾನಿಲಯಗಳಲ್ಲಿ ಒಟ್ಟು 6279 ವಿದ್ಯಾರ್ಥಿಗಳು ಕನ್ನಡವನ್ನು ಮುಖ್ಯ ವಿಷಯವಾಗಿ ಅಧ್ಯಯನ ಮಾಡುತ್ತಿರುತ್ತಾರೆ. |
| ಇ) | ಕನ್ನಡ ಶಾಸ್ತ್ರೀಯ ಭಾಷೆಯಾಗಿ ಮಾನ್ಯತೆ ಪಡೆದ ನಂತರ ಕನ್ನಡ ಪಸರಿಸುವಿಕೆಗೆ ಯಾವ ಕ್ರಮ ವಹಿಸಲಾಗಿದೆ; | ಕನ್ನಡ ಶಾಸ್ತ್ರೀಯ ಭಾಷೆಯಾಗಿ ಮಾನ್ಯತೆ ಪಡೆದ ನಂತರ ಕನ್ನಡ ಪಸರಿಸುವಿಕೆಗೆ ಸಂಬಂಧ ಕೈಗೊಂಡಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ -3ರಲ್ಲಿ ಲಗತ್ತಿಸಿದೆ. |

......4

| | | |
|---|---|---|
| ಈ) | ರಾಜ್ಯದಲ್ಲಿರುವ ಕನ್ನಡದ ಇತಿಹಾಸ ಕಲಾ ಸಂಸ್ಕೃತಿ ಸಾರುವ ಶಾಸನಗಳನ್ನು ಗುರುತಿಸಲಾಗಿದೆಯೇ; ಅವುಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮ; ಎಲ್ಲಿವೆ; ಯಾವುವು? | ಪುರಾತತ್ವ ಇಲಾಖೆಯು 1885ರಲ್ಲಿ ಅಸ್ತಿತ್ವಕ್ಕೆ ಬಂದಾಗಿನಿಂದಲೇ ಕರ್ನಾಟಕ ಇತಿಹಾಸ ಸಾರುವ ಶಾಸನಗಳನ್ನು ಗುರುತಿಸಿ ಅವುಗಳಲ್ಲಿರುವ ಮಾಹಿತಿಯನ್ನು ಸಂಗ್ರಹಿಸುವ ಕಾರ್ಯವನ್ನು ಕೈಗೊಂಡು ಅವುಗಳನ್ನು ಎಪಿಗ್ರಫಿಯ ಕರ್ನಾಟಿಕ ಎಂಬ 9 ಸಂಪುಟಗಳಲ್ಲಿ ಹೊರತರಲಾಗಿದ್ದು, ಇದರಲ್ಲಿ 9000ಕ್ಕೂ ಅಧಿಕ ಶಾಸನಗಳ ಮಾಹಿತಿಯನ್ನು ಕ್ರೋಢೀಕರಿಸಲಾಗಿದೆ. ಅಲ್ಲದೆ ಮೈಸೂರು ಪುರಾತತ್ವ ವರದಿಯಲ್ಲಿ ರಾಜ್ಯದಲ್ಲಿ ದೊರೆತಿರುವ ಶಾಸನಗಳ ಮಾಹಿತಿಯು ಸಹ ಇದರಲ್ಲಿದೆ.<br><br>ಕನ್ನಡದ ಪ್ರಮುಖ ಶಾಸನಗಳಾದ ಹಲ್ಮಿಡಿ, ಆತಕೂರು, ಬೇಗೂರು ಹಾಗೂ ಇತರ ಪ್ರಮುಖ ತಾಮ್ರಶಾಸನಗಳನ್ನು ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ರಕ್ಷಿಸಿ ಸಾರ್ವಜನಿಕರ ಪ್ರದರ್ಶನಕ್ಕೆ ಇಡಲಾಗಿದೆ.<br><br>ರಾಜ್ಯದ 16 ವಸ್ತುಸಂಗ್ರಹಾಲಯಗಳ ಪ್ರದೇಶಗಳಲ್ಲಿ ದೊರೆಯುವ ಪ್ರಮುಖ ಶಾಸನಗಳನ್ನು ವಸ್ತುಸಂಗ್ರಹಾಲಯದಲ್ಲಿ ರಕ್ಷಣೆ ಮಾಡಿಕೊಂಡು ಬರಲಾಗುತ್ತಿದೆ ಹಾಗೂ ಸಾರ್ವಜನಿಕರು ಶಾಸನಗಳಿರುವ ಬಗ್ಗೆ ಮಾಹಿತಿ ನೀಡಿದ್ದಲ್ಲಿ ಅವುಗಳನ್ನು ಸ್ಥಳದಲ್ಲೇ ರಕ್ಷಿಸುವ ಕೆಲಸವನ್ನು ಇಲಾಖೆಯು ಮಾಡಿಕೊಂಡು ಬರುತ್ತಿದೆ.<br><br>2019-20ನೇ ಸಾಲಿನಿಂದ ಗ್ರಾಮವಾರು ಸಮೀಕ್ಷೆಯನ್ನು ಇಲಾಖೆ ವತಿಯಿಂದ ಕೈಗೊಂಡು ಬರುತ್ತಿದ್ದು, ಈ ಸಮೀಕ್ಷೆಯಲ್ಲಿ ದೊರೆಯುವ ಶಾಸನಗಳ ದಾಖಲೀಕರಣವನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಕಸಂವಾ 115 ಕೆಎಲ್ ಆಕ 2021.

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

RNI No. KARBIL/2001/47147

ಅನುಬಂಧ-1

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| | | |
|---|---|---|
| ಭಾಗ–IVA | ಬೆಂಗಳೂರು, ಶನಿವಾರ, ಅಕ್ಟೋಬರ್ ೨೧, ೨೦೧೭ (ಆಶ್ವಯುಜ ೨೯, ಶಕ ವರ್ಷ ೧೯೩೯) | ನಂ. ೯೭೧ |
| Part–IVA | Bengaluru, Saturday, October 21, 2017 (Aashwayuja 29, Shaka Varsha 1939) | No. 971 |


ಶಿಕ್ಷಣ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಇಡಿ 274 ಪಿಜಿಸಿ 2017, ಬೆಂಗಳೂರು, ದಿನಾಂಕ: 21/10/2017**

ಕನ್ನಡ ಭಾಷಾ ಕಲಿಕೆ ಅಧಿನಿಯಮ 2015ರ (2015ರ ಕರ್ನಾಟಕ ಅಧಿನಿಯ ಸಂಖ್ಯೆ:22)ರ 8ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕನ್ನಡ ಭಾಷಾ ಕಲಿಕೆ ನಿಯಮಗಳು, 2017ರ ಕರಡನ್ನು ಸದರಿ ಅಧಿನಿಯಮದ 8ನೇ ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ: ಇಡಿ 274 ಪಿಜಿಸಿ 2017, ದಿನಾಂಕ: 07.06.2017ನ್ನು ದಿನಾಂಕ: 20.07.2017ರಂದು ಕರ್ನಾಟಕ ರಾಜ್ಯಪತ್ರದ ಭಾಗ–IVA ರಲ್ಲಿ ಪ್ರಕಟಿಸಿದ್ದು, ಆ ಮೂಲಕ ಭಾದಿತರಾಗುವ ಸಂಭವವಿರುವ ವ್ಯಕ್ತಿಗಳಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ದಿನಾಂಕ: 20.07.2017ರ ರಾಜ್ಯಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಸದರಿ ಕರಡು ನಿಯಮಗಳ ಬಗ್ಗೆ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಸ್ವೀಕರಿಸದೆ ಇರುವುದರಿಂದ;

ಈಗ ಕನ್ನಡ ಭಾಷಾ ಕಲಿಕೆ ನಿಯಮಗಳು, 2017ನ್ನು ಕನ್ನಡ ಭಾಷಾ ಕಲಿಕೆ ಅಧಿನಿಯಮ 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ:22)ರ 8ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ, ಎಂದರೆ:–

### ನಿಯಮಗಳು

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ ವಿಸ್ತರಣೆ.–** (1) ಈ ನಿಯಮಗಳನ್ನು ಕನ್ನಡ ಭಾಷಾ ಕಲಿಕೆ ನಿಯಮಗಳು, 2017 ಎಂದು ಕರೆಯತಕ್ಕದ್ದು;

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು,–

(ಅ) "ಅಧಿನಿಯಮ" ಎಂದರೆ ಕನ್ನಡ ಭಾಷಾ ಕಲಿಕೆ ಅಧಿನಿಯಮ 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ 22);

(ಆ) "ಕ್ಷೇತ್ರ ಶಿಕ್ಷಣಾಧಿಕಾರಿಗಳು" ಎಂದರೆ ಆಯಾ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ;

(ಇ) "ಕರ್ನಾಟಕ ಪಠ್ಯ ಪುಸ್ತಕ ಸಂಘ" ಎಂದರೆ ಶಾಲಾ ಪಠ್ಯ ಪುಸ್ತಕಗಳ ತಯಾರಿಕೆ, ಮುದ್ರಣ, ಮಾರಾಟ ಮತ್ತು ಸರಬರಾಜು ಮಾಡಲು ಸರ್ಕಾರದಿಂದ ಸ್ಥಾಪಿತವಾದ ಸಂಘ; ಮತ್ತು

(ಈ) 'ಪ್ರಕರಣ' ಎಂದರೆ ಅಧಿನಿಯಮದ ಪ್ರಕರಣ

(2) ಈ ನಿಯಮದಲ್ಲಿ ಉಪಯೋಗಿಸಿರುವ ಆದರೆ ಪರಿಭಾಷಿಸದಿರುವ ಪದ ಮತ್ತು ಪದಾವಳಿಗಳಿಗೆ ಅಧಿನಿಯಮದಲ್ಲಿ ಗೊತ್ತುಪಡಿಸಿದ ಅರ್ಥವನ್ನು ಹೊಂದಿರತಕ್ಕದ್ದು.

3. **ಕನ್ನಡ ಭಾಷಾ ಕಲಿಕೆಯನ್ನು ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ.**– (1) ಯಾವ ಯಾವ ಶಾಲೆಗಳಲ್ಲಿ 2015–16ನೇ ಸಾಲಿನಿಂದ ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸುವುದನ್ನು ಪ್ರಕರಣ 3(2) ರನ್ವಯ ಪ್ರಾರಂಭಿಸಿರುವುದಿಲ್ಲವೋ ಅಂಥ ಶಾಲೆಗಳಲ್ಲಿ 2017–18ನೇ ಶೈಕ್ಷಣಿಕ ವರ್ಷದಿಂದ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸುವುದನ್ನು ಆರಂಭಿಸತಕ್ಕದ್ದು ಹಾಗೂ 2018–19ನೇ ಶೈಕ್ಷಣಿಕ ವರ್ಷದಲ್ಲಿ 1ನೇ ಮತ್ತು 2ನೇ ತರಗತಿಗಳಲ್ಲಿ ಹಾಗೂ ಇದೇ ರೀತಿ 10ನೇ ತರಗತಿಯವರೆಗೆ ಕೆಳಕಂಡಂತೆ ಕನ್ನಡ ಭಾಷಾ ಕಲಿಕೆಯನ್ನು ಹಂತಹಂತವಾಗಿ ವಿಸ್ತರಿಸತಕ್ಕದ್ದು.

| ಶೈಕ್ಷಣಿಕ ವರ್ಷ | ತರಗತಿ |
|---|---|
| 2017–18 | 1ನೇ ತರಗತಿ |
| 2018–19 | 1 ಮತ್ತು 2ನೇ ತರಗತಿ |
| 2019–20 | 1, 2 ಮತ್ತು 3ನೇ ತರಗತಿ |
| 2020–21 | 1, 2, 3 ಮತ್ತು 4ನೇ ತರಗತಿ |
| 2021–22 | 1, 2, 3, 4 ಮತ್ತು 5ನೇ ತರಗತಿ |
| 2022–23 | 1, 2, 3, 4, 5 ಮತ್ತು 6ನೇ ತರಗತಿ |
| 2023–24 | 1, 2, 3, 4, 5, 6 ಮತ್ತು 7ನೇ ತರಗತಿ |
| 2024–25 | 1, 2, 3, 4, 5, 6, 7 ಮತ್ತು 8ನೇ ತರಗತಿ |
| 2025–26 | 1, 2, 3, 4, 5, 6, 7, 8 ಮತ್ತು 9ನೇ ತರಗತಿ |
| 2026–27 | 1, 2, 3, 4, 5, 6, 7, 8, 9 ಮತ್ತು 10ನೇ ತರಗತಿ |

ಪರಂತು, ಇತರೇ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದು 2 ರಿಂದ 10ನೇ ತರಗತಿಯಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ, 1ನೇ ತರಗತಿಗೆ ನಿಗದಿಪಡಿಸಿದ ಪಠ್ಯಪುಸ್ತಕವನ್ನು ಅವರು ಕರ್ನಾಟಕದಲ್ಲಿನ ವ್ಯಾಸಂಗದ ಮೊದಲ ವರ್ಷದಲ್ಲಿ ಕಲಿಯತಕ್ಕದ್ದು. 2ನೇ ವರ್ಷ ಮತ್ತು ತದನಂತರದ ವರ್ಷಗಳಲ್ಲಿ ಕಲಿಯುವ ಪಠ್ಯಪುಸ್ತಕಗಳು ಕ್ರಮಬದ್ಧವಾಗಿ 2ನೇ ತರಗತಿ, 3ನೇ ತರಗತಿ ಹೀಗೆ ಅನುಕ್ರಮವಾಗಿ ಮುಂದಿನ ತರಗತಿಗಳ ಪಠ್ಯಪುಸ್ತಕಗಳಾಗಿರತಕ್ಕದ್ದು.

(2). ಯಾವ ಶಾಲೆಯಲ್ಲಿ ಪ್ರಾರಂಭಿಕ ತರಗತಿಯು 1ನೇ ತರಗತಿಯಾಗಿರುವುದಿಲ್ಲವೋ ಅಂತಹ ಶಾಲೆಯಲ್ಲಿನ ಪ್ರಾರಂಭಿಕ ತರಗತಿಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸುವುದನ್ನು ಮೇಲಿನ ಕೋಷ್ಟಕದಲ್ಲಿ ತಿಳಿಸಿರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸತಕ್ಕದ್ದು.

4. **ಕಡ್ಡಾಯ ಭಾಷೆಯಾಗಿ ಕನ್ನಡವನ್ನು ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆಯಾಗಿ ಕಲಿಸಲು ನಿಗದಿಪಡಿಸಲಾದ ಪಠ್ಯಪುಸ್ತಕ.**– ಎಲ್ಲಾ ಮಾಧ್ಯಮದ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸಲು ಕೆಳಕಂಡ ಪಠ್ಯಪುಸ್ತಕಗಳನ್ನು ನಿಗದಿಪಡಿಸಲಾಗಿದೆ.

| ತರಗತಿ | ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಕಲಿಸಲು ನಿಗದಿಪಡಿಸಲಾದ ಪಠ್ಯಪುಸ್ತಕಗಳು | ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ಕಲಿಸಲು ನಿಗದಿಪಡಿಸಲಾದ ಪಠ್ಯಪುಸ್ತಕಗಳು |
|---|---|---|
| 1. | ನಲಿಕಲಿ ಕನ್ನಡ/ಕಲಿನಲಿ ಕನ್ನಡ (ಸವಿ ಕನ್ನಡ) | ಕಲಿ ಕನ್ನಡ (ಪರಿಚಯ ಭಾಷೆ ಕನ್ನಡ) |
| 2. | ನಲಿಕಲಿ ಕನ್ನಡ/ಕಲಿನಲಿ ಕನ್ನಡ (ಸವಿ ಕನ್ನಡ) | ಕಲಿ ಕನ್ನಡ (ಪರಿಚಯ ಭಾಷೆ ಕನ್ನಡ) |
| 3. | ನಲಿಕಲಿ ಕನ್ನಡ/ಕಲಿನಲಿ ಕನ್ನಡ (ಸವಿ ಕನ್ನಡ) | ಕಲಿ ಕನ್ನಡ (ಪರಿಚಯ ಭಾಷೆ ಕನ್ನಡ) |
| 4. | ನಲಿಕಲಿ ಕನ್ನಡ/ಕಲಿನಲಿ ಕನ್ನಡ (ಸವಿ ಕನ್ನಡ) | ಕಲಿ ಕನ್ನಡ (ಪರಿಚಯ ಭಾಷೆ ಕನ್ನಡ) |
| 5. | ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕ | ಕನ್ನಡ ದ್ವಿತೀಯ ಭಾಷೆ ಪಠ್ಯಪುಸ್ತಕ |
| 6. | ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕ | ಕನ್ನಡ ದ್ವಿತೀಯ ಭಾಷೆ ಪಠ್ಯಪುಸ್ತಕ |
| 7. | ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕ | ಕನ್ನಡ ದ್ವಿತೀಯ ಭಾಷೆ ಪಠ್ಯಪುಸ್ತಕ |
| 8. | ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕ | ಕನ್ನಡ ದ್ವಿತೀಯ ಭಾಷೆ ಪಠ್ಯಪುಸ್ತಕ |
| 9. | ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕ | ಕನ್ನಡ ದ್ವಿತೀಯ ಭಾಷೆ ಪಠ್ಯಪುಸ್ತಕ |
| 10. | ಕನ್ನಡ ಪ್ರಥಮ ಭಾಷೆ ಪಠ್ಯಪುಸ್ತಕ | ಕನ್ನಡ ದ್ವಿತೀಯ ಭಾಷೆ ಪಠ್ಯಪುಸ್ತಕ |

ಸೂಚನೆ.-



(1) 1 ರಿಂದ 4ನೇ ತರಗತಿ ಕನ್ನಡ ಪ್ರಥಮ ಭಾಷೆ ಪುಸ್ತಕಗಳಿಗೆ ಸಂಬಂಧಿಸಿದಂತೆ ನಲಿಕಲಿ ಪುಸ್ತಕಗಳು ಸರ್ಕಾರಿ ಶಾಲೆಗಳಿಗೆ ಅನ್ವಯಿಸುತ್ತದೆ. ಕಲಿನಲಿ ಪುಸ್ತಕಗಳು ಖಾಸಗಿ ಶಾಲೆಗಳಿಗೆ ಅನ್ವಯಿಸುತ್ತದೆ.

(2) ಮೇಲ್ಕಂಡ ಪುಸ್ತಕಗಳನ್ನು ಕರ್ನಾಟಕ ಪಠ್ಯಪುಸ್ತಕ ಸಂಘದಿಂದ ಖರೀದಿಸುವುದು.

**5. ಸಕ್ಷಮ ಪ್ರಾಧಿಕಾರಿಯ ನೇಮಕ.–** ಎಲ್ಲಾ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆಯನ್ನು ಕಡ್ಡಾಯವಾಗಿ ಜಾರಿಗೊಳಿಸಲು ಹಾಗೂ ಕನ್ನಡ ಭಾಷಾ ಕಲಿಕೆ ಅನುಷ್ಠಾನ ಮಾಡಿರುವ ಬಗ್ಗೆ ಮೇಲ್ವಿಚಾರಣೆ ನಡೆಸಿ ಜಾರಿಗೊಳಿಸದ ಶಾಲೆಗಳ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 240 ಪಿಜಿಸಿ 2017, ದಿನಾಂಕ:10–05–2017 ರಲ್ಲಿ ನೇಮಿಸಲಾದ ಅಧಿಕಾರಿಗಳು ಅವರವರ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಸಕ್ಷಮ ಪ್ರಾಧಿಕಾರಿಯಾಗಿರತಕ್ಕದ್ದು.

**6. ಸಕ್ಷಮ ಪ್ರಾಧಿಕಾರಿಯ ಕರ್ತವ್ಯಗಳು.–** (1) ತಮ್ಮ ಶೈಕ್ಷಣಿಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಮಾಧ್ಯಮದ ಶಾಲೆಗಳನ್ನು ಗುರ್ತಿಸಿಕೊಂಡಿರತಕ್ಕದ್ದು;

(2) ಎಲ್ಲಾ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆ ಕಡ್ಡಾಯವಾಗಿ ಜಾರಿಗೊಳಿಸಲು ಅಗತ್ಯವಾದ ಕ್ರಮವಹಿಸತಕ್ಕದ್ದು. ಈ ಸಂಬಂಧ ಅಗತ್ಯ ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ತಮ್ಮ ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಹೊರಡಿಸತಕ್ಕದ್ದು;

(3) ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಪ್ರತಿ ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆ ಜಾರಿಗೊಳಿಸಿರುವ ಬಗ್ಗೆ ಶಾಲಾವಾರು ವರದಿಯನ್ನು ಕ್ರೋಢೀಕರಿಸಿ ದಾಖಲಿಸತಕ್ಕದ್ದು ಹಾಗೂ ಜಾರಿಗೊಳಿಸಿರುವ ಬಗ್ಗೆ ಶಾಲಾವಾರು ವರದಿಯನ್ನು ಕ್ರೋಢೀಕರಿಸಿ ದಾಖಲಿಸತಕ್ಕದ್ದು ಹಾಗೂ ಪಾಲಿಸಿರುವ ಮತ್ತು ಪಾಲಿಸದೇ ಇರುವ ಶಾಲೆಗಳ ಮಾಹಿತಿಯನ್ನು (ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾಹಿತಿಗಳನ್ನು) ಪ್ರತ್ಯೇಕವಾಗಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳಿಗೆ ಉಪನಿರ್ದೇಶಕರ ಮುಖಾಂತರ ಸಲ್ಲಿಸತಕ್ಕದ್ದು;

(4) ಈ ನಿಯಮಗಳನ್ನು ಜಾರಿಗೊಳಿಸದೇ ಇರುವ ಶಾಲೆಗಳ ವಿರುದ್ಧ ಹಾಗೂ ಈ ಕುರಿತು ಯಾವುದೇ ದೂರುಗಳು ಬಂದಲ್ಲಿ ಸಕ್ಷಮ ಪ್ರಾಧಿಕಾರಿಯು ಈ ಬಗ್ಗೆ ಅಧಿನಿಯಮದ 6ನೇ ಪ್ರಕರಣದ (1)ನೇ ಉಪ–ಪ್ರಕರಣದಂತೆ ವಿಚಾರಣೆ ನಡೆಸತಕ್ಕದ್ದು.

(5) ಸಕ್ಷಮ ಪ್ರಾಧಿಕಾರಿಯು ಈ ಸಂಬಂಧ ವಿಚಾರಣೆ ನಡೆಸುವ ಮುನ್ನಾ ಶಾಲೆಗೆ ಭೇಟಿ ನೀಡಲು, ಅಗತ್ಯ ದಾಖಲೆಗಳನ್ನು ಪರಿಶೀಲಿಸಲು, ನೋಟಿಸ್ ಜಾರಿಮಾಡಲು ಅಥವಾ ಅಗತ್ಯ ಕ್ರಮವಹಿಸತಕ್ಕದ್ದು.

(6) ಈ ವಿಚಾರಣೆಯನ್ನು ಸಕ್ಷಮ ಪ್ರಾಧಿಕಾರಿಯು ನೋಟೀಸ್ ಜಾರಿಮಾಡಿದ ದಿನದಿಂದ ಮೂವತ್ತು ದಿನಗೊಳಗಾಗಿ ನಡೆಸುವುದು. ಒಂದು ವೇಳೆ ವಿಚಾರಣೆಯ ನಂತರ ಶಾಲೆಗಳ ವಿರುದ್ಧ ಆರೋಪ ಸಾಬೀತಾದರೆ ಅಂತಹ ಶಾಲೆಗಳು ಕನ್ನಡ ಭಾಷಾ ಕಲಿಕೆ ಅಧಿನಿಯಮ 2015ರ, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 7ನೇ ಪ್ರಕರಣ ಹಾಗೂ ಈ ನಿಯಮಗಳ 4ನೇ ನಿಯಮದ ಉಲ್ಲಂಘನೆ ಮಾಡಿದಂತಾಗುತ್ತದೆ. ಅಂತಹ ಶಾಲೆಗಳಿಗೆ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 128ನೇ ಪ್ರಕರಣದಲ್ಲಿ ತಿಳಿಸಿದಂತೆ ದಂಡವನ್ನು ವಿಧಿಸಲು ಸಕ್ಷಮ ಪ್ರಾಧಿಕಾರಿಗಳಿಗೆ ಅವಕಾಶ ಕಲ್ಪಿಸಲಾಗಿದೆ; ಮತ್ತು

(7) ಸಕ್ಷಮ ಪ್ರಾಧಿಕಾರಿಯು ಪ್ರತಿ ಶಾಲೆಯಲ್ಲಿ ಸರ್ಕಾರ ನಿಗಧಿಪಡಿಸಿರುವ ಪ್ರಥಮ ಮತ್ತು ದ್ವಿತೀಯ ಭಾಷೆಯ ಕನ್ನಡ ಪಠ್ಯಪುಸ್ತಕಗಳನ್ನು ಬಳಸಿ ಕನ್ನಡ ಭಾಷೆ ಕಲಿಕೆ ಕಡ್ಡಾಯವಾಗಿ ಜಾರಿಯಲ್ಲಿರುವ ಬಗ್ಗೆ ಹಾಗೂ ಪಠ್ಯಮುಸ್ತಕಗಳ ಲಭ್ಯತೆಯ ಬಗ್ಗೆ ನಿಯಮದ ಚೌಕಟ್ಟಿನಲ್ಲಿ ಖಾತ್ರಿ ಮಾಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

**ವಿ.ನಾಗೇಶ ರಾವ್**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ8) ಪ್ರತಿಗಳು: 1000

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ ೬೧೬ ಸೇನೆನಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು
ದಿನಾಂಕ: 06/07/2017

## ಸುತ್ತೋಲೆ

ವಿಷಯ : ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ದೇಶದ ಪ್ರತಿಯೊಬ್ಬ ಅಭ್ಯರ್ಥಿಯನ್ನು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1)(ಸಿ)ರಡಿ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಉಲ್ಲೇಖ : ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಆರ್ 2001, ದಿನಾಂಕ: 24/10/2002.

*****

ಉಲ್ಲೇಖಿತ ದಿನಾಂಕ: 24/10/2002ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಆರ್ 2001ರನ್ವಯ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ಕ್ಕೆ ತಿದ್ದುಪಡಿ ಮಾಡಿ ನಿಯಮ 9(1)(ಸಿ)ನ್ನು ಸೇರ್ಪಡೆಗೊಳಿಸಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಪ್ರತಿಯೊಬ್ಬರಿಗೂ ರಾಜ್ಯ ನಾಗರಿಕ ಸೇವಾ ಹುದ್ದೆಗಳ ನೇರ ನೇಮಕಾತಿಯಲ್ಲಿ ಶೇಕಡ.5ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.

ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1)(ಸಿ)ರಲ್ಲಿ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿರುವ ಅಭ್ಯರ್ಥಿಯನ್ನು ಪರಿಗಣಿಸುವ ಬಗ್ಗೆ ಕೆಳಕಂಡಂತೆ ತಿಳಿಸಲಾಗಿದೆ.

"…. candidates who have studied in Kannada Medium from first standard to tenth standard where the qualifying examination prescribed for a post is S.S.L.C. or higher or from first standard to qualifying examination where the qualifying examination prescribed for a post is lower than S.S.L.C."

ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಮೀಸಲಾತಿಯನ್ನು ಪಡೆಯಲು ರಾಜ್ಯ ನಾಗರಿಕ ಸೇವಾ ಹುದ್ದೆಗಳಿಗೆ ಎಸ್.ಎಸ್.ಎಲ್.ಸಿ. ಗಿಂತಲೂ ಹೆಚ್ಚಿನ ವಿದ್ಯಾಭ್ಯಾಸವನ್ನು ನಿಗದಿಪಡಿಸಿದ್ದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕಾಗುತ್ತದೆ ಹಾಗೂ ಎಸ್.ಎಸ್.ಎಲ್.ಸಿ ಗಿಂತಲೂ ಕಡಿಮೆ ವಿದ್ಯಾರ್ಹತೆಯನ್ನು ಹುದ್ದೆಗೆ ನಿಗದಿಪಡಿಸಿದ್ದಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ(ತರಗತಿ)ವರೆಗೂ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕಾಗಿರುತ್ತದೆ.

1977ರ ನಿಯಮ 9(1)(ಸಿ)ರಲ್ಲಿ ಕಲ್ಪಿಸಿರುವ ಅವಕಾಶವನ್ನು "ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಪ್ರತಿಯೊಬ್ಬ ಅಭ್ಯರ್ಥಿಯು ಪಡೆಯಬಹುದಾಗಿರುತ್ತದೆ.

ಪು.ತಿ.ನೋ..2

ಸಂಖ್ಯೆ 887 ದಿನಾಂಕ 14/8/2017

Scanned with CamScanner

ರಾಜ್ಯ ನಾಗರಿಕ ಸೇವಾ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳ ಮೀಸಲಾತಿಯಡಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವಾಗ ಮೇಲ್ಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪರಿಗಣಿಸುವಂತೆ ಎಲ್ಲಾ ಆಯ್ಕೆ / ನೇಮಕಾತಿ ಪ್ರಾಧಿಕಾರಗಳಿಗೆ ಈ ಮೂಲಕ ತಿಳಿಸಲಾಗಿದೆ.

Gayathri M.R
06-07-17

(ಗಾಯತ್ರಿ.ಎಂ.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ದಿನಾಂಕ: 06/07/2017ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ 200 ಪ್ರತಿಗಳನ್ನು ಒದಗಿಸಲು.

ಪ್ರತಿ:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ), (ಇ & ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು
5. ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
7. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರು
8. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯಮಾರ್ಗ, ಚಾಣಕ್ಯಪುರಿ, ನವದೆಹಲಿ-110021
9. *ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ / ಪರಿಷತ್ತು, ಬೆಂಗಳೂರು
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
13. *ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009.
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬಹುಮಹಡಿ ಕಟ್ಟಡ, ಬೆಂಗಳೂರು
15. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು
16. ಎಲ್ಲಾ ಆರಕ್ಷಕ ಮಹಾ ನಿರೀಕ್ಷಕರು ಮತ್ತು ಉಪ ಆರಕ್ಷಕ ಮಹಾ ನಿರೀಕ್ಷಕರು
17. ಎಲ್ಲಾ ಇಲಾಖಾ ಮುಖ್ಯಸ್ಥರು
18. ಎಲ್ಲಾ ಪ್ರಾದೇಶಿಕ ಆಯುಕ್ತರು / ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ / ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು
19. ಸರ್ಕಾರದ ಎಲ್ಲಾ ವಿಶೇಷ / ಅಪರ / ಜಂಟಿ / ಉಪ / ಅಧೀನ ಕಾರ್ಯದರ್ಶಿಗಳು
20. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು
21. ಶಾಖಾ ರಕ್ಷಾ ಕಡತ / ಅಧಿಕ ಪ್ರತಿಗಳು

(* ಮುಖ ಪತ್ರದೊಂದಿಗೆ)

Scanned with CamScanner

ಅನುಬಂಧ - 3

ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರದ ವತಿಯಿಂದ ನಡೆದ ವಿವಿಧ ತರಬೇತಿ ಶಿಬಿರಗಳು / ಕಾರ್ಯಾಗಾರಗಳ ವಿವರ

1ನೇ ಏಪ್ರಿಲ್ 2013 ರಿಂದ 31ನೇ ಮಾರ್ಚ್ 2014 ರವರಗೆ

| ಕ್ರ. ಸಂ | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಹಳಗನ್ನಡ ಓದು ಓರಿಯೆಂಟೇಶನ್ ತರಬೇತಿ ಶಿಬಿರ | ದೇವನೂರು | 23.08.2013 ರಿಂದ 25.08.2013 | 3 | 80 |
| 2 | ಶಿಲಾ ಶಾಸನದಲ್ಲಿ ಸೆಮಿನಾರ್ | ಬೆಂಗಳೂರು | 25.09.2013 ರಿಂದ 26.09.2013 | 2 | 65 |
| 3 | ಕನ್ನಡದಲ್ಲಿ ಶಾಸ್ತ್ರೀಯ ಭಾಷೆಯ ಚಟುವಟಿಕೆಗಳಿಗೆ ಮಾರ್ಗಸೂಚಿಯನ್ನು ನಿರ್ಧರಿಸಲು ಉನ್ನತ ಮಟ್ಟದ ಸಮಿತಿ ಸಭೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 25.10.2013 ರಿಂದ 27.10.2013 | 3 | |
| 4 | ಶಾಸ್ತ್ರೀಯ ಕನ್ನಡದ ತರಬೇತಿ ಕಾರ್ಯಕ್ರಮಕ್ಕಾಗಿ ಪಠ್ಯಕ್ರಮದ ಸಿದ್ಧತೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 19.11.2013 ರಿಂದ 21.11.2013 | 3 | |
| 5 | ಶಾಸ್ತ್ರೀಯ ಕನ್ನಡದ ಓರಿಯೆಂಟೇಶನ್ ಕಾರ್ಯಕ್ರಮ | ಶೃಂಗೇರಿ ವಿದ್ಯಾಲಯ, ಶೃಂಗೇರಿ | 20.12.2013 ರಿಂದ 22.12.2013 | 3 | 40 |
| 6 | ಕನ್ನಡ ಲಿಂಗ್ವಿಸ್ಟಿಕ್ಸ್ ಎಪಿಗ್ರಫಿ (ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರದ ಚಟುವಟಿಕೆಗಳಿಗಾಗಿ ರೋಡ್ ಮ್ಯಾಪ್ ತಯಾರಿಕೆ) | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 28.01.2014 ರಿಂದ 30.01.2014 | 3 | 19 |

1ನೇ ಏಪ್ರಿಲ್ 2014 ರಿಂದ 31ನೇ ಮಾರ್ಚ್ 2015 ರವರಗೆ

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಶಾಸ್ತ್ರೀಯ ಕನ್ನಡದ ಕೋರ್ಸ್ ವಿಷಯಗಳು ಮತ್ತು ಪ್ರೋಗ್ರಾಂನ ಬರಹಗಳನ್ನು ವಿನ್ಯಾಸಗೊಳಿಸಲು ಸಭೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 06.10.2014 ರಿಂದ 10.10.2014 | 5 | |
| 2 | ಹೈದರಾಬಾದ್-ಕರ್ನಾಟಕ ಪ್ರದೇಶದ ಬರಹಗಾರರ ಶಾಸ್ತ್ರೀಯ ಕನ್ನಡದ ಕೊಡುಗೆ ಕುರಿತು ರಾಷ್ಟ್ರೀಯ ಸೆಮಿನಾರ್ | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ | 27.10.2014 ರಿಂದ 28.10.2014 | 2 | |
| 3 | ಶಾಸ್ತ್ರೀಯ ಕನ್ನಡ ಯೋಜನೆಗೆ ಅಭ್ಯರ್ಥಿಗಳ ಆಯ್ಕೆಗೆ ಪರಿಶೀಲನಾ ಸಭೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 31.10.2014 | 2 | |

| | | | | | |
|---|---|---|---|---|---|
| | | | ರಿಂದ 1.11.2014 | | |
| 4 | ಶಾಸ್ತ್ರೀಯ ಕನ್ನಡ ಕುರಿತು ಕಾರ್ಯಾಗಾರ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 05.11.2014 ರಿಂದ 14.11.2014 | 10 | 50 |
| 5 | ಕನ್ನಡ ಶಾಸನ ಸಾಹಿತ್ಯದ ಕಾರ್ಯಾಗಾರ: ಸ್ವರೂಪಾ ಸಮೀಕ್ಷೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 10.12.2014 ರಿಂದ 19.12.2014 | 10 | 51 |
| 6 | ಕೆಳಗಿನ ಪುಸ್ತಕಗಳ ಮುದ್ರಣ ಪೂರ್ವ ಪರಿಶೀಲನಾ ಕಾರ್ಯಾಗಾರ<br>ಅ. ಮಹಾಕಾವ್ಯಲಕ್ಷಣಗಳು - ಪ್ರೊ. ವೆಂಕಟಾಚಲ ಶಾಸ್ತ್ರೀ<br>ಆ. ಉದಯಾಧಿತ್ಯಾಲಂಕಾರ - ಪ್ರೊ. ಆರ್.ವಿ. ಸುಂದರಂ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | ಜನವರಿ 2015 | 1 | 2 |

**1ನೇ ಏಪ್ರಿಲ್ 2015 ರಿಂದ 31ನೇ ಮಾರ್ಚ್ 2016 ರವರೆಗೆ**

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಶಾಸ್ತ್ರೀಯ ಕನ್ನಡದ ತರಬೇತಿ ಶಿಬಿರ | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ | 21.09.2015 ರಿಂದ 30.09.2015 | 10 | 42 |
| 2 | ಶಾಸ್ತ್ರೀಯ ಕನ್ನಡದ ಕಾರ್ಯಾಗಾರ | ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಗುಲ್ಬರ್ಗಾ | 26.10.2015 ರಿಂದ 04.11.2015 | 10 | 58 |
| 3 | ಶಾಸ್ತ್ರೀಯ ಕನ್ನಡ ಹಾಗೂ ಸಾಹಿತ್ಯದ ಕಾರ್ಯಾಗಾರ | ಡಾ. ಆರ್. ಸಿ. ಹಿರೇಮಠ ಕನ್ನಡ ಸಂಸ್ಥಾನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | 23.11.2015 ರಿಂದ 27.11.2015 | 5 | 50 |

| | | | | | |
|---|---|---|---|---|---|
| 4 | ಕನ್ನಡ ರಾಜ್ಯೋತ್ಸವ ಆಚರಣೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 30.11.2015 | 1 | 300 |
| 5 | ಶಾಸ್ತ್ರೀಯ ಕನ್ನಡ ಹಾಗೂ ಜಾನಪದ ಕುರಿತ ತರಬೇತಿ ಶಿಬಿರ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 30.11.2015 ರಿಂದ 09.12.2015 | 10 | 70 |
| 6 | ಪ್ರಾಚೀನ ಕನ್ನಡದ ಆಕರಗಳು : ಪಠ್ಯವಾಚನ ಮತ್ತು ಅಧ್ಯಯನ ಕಾರ್ಯಾಗಾರ | ವಿ.ಹೆಚ್.ಡಿ. ಸಂಸ್ಥೆ, ಬೆಂಗಳೂರು | 07.12.2015 ರಿಂದ 16.12.2015 | 10 | 112 |
| 7. | ಕನ್ನಡ ಭಾಷೆ :ಸಾಹಿತ್ಯ: ಬಹುಶಿಸ್ತೀನ ನೆಲೆಗಳು ಕಾರ್ಯಾಗಾರ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 14.12.2015 ರಿಂದ 20.12.2015 | 7 | 40 |
| 8 | ಕನ್ನಡ ಅಭಿಜಾತ ಸಾಹಿತ್ಯ ಪರಂಪರೆ: ದೃಷ್ಟಿದೋರಣೆ ಕುರಿತು ಕಾರ್ಯಾಗಾರ | ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ | 30.03.2016 ರಿಂದ 05.05.2016 | 7 | 51 |

## 1ನೇ ಏಪ್ರಿಲ್ 2016 ರಿಂದ 31ನೇ ಮಾರ್ಚ್ 2017 ರವರೆಗೆ

| ಕ್ರ. ಸಂ | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ನಾಡೋಜ ಹೆಚ್.ಎಲ್. ನಾಗೇಗೌಡರ ನೂರರ ನೆನಪು - ಸೆಮಿನಾರ್ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 07.06.2016 | 1 | 80 |
| 2 | ಅಭಿಜಾತ ಕನ್ನಡ ಮತ್ತು ಪಠ್ಯವಾಚನದ ಕುರಿತು - ತರಬೇತಿ ಶಿಬಿರ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 25.07.2016 ರಿಂದ 29.07.2016 | 5 | 40 |
| 3 | ಅಭಿಜಾತ ಕನ್ನಡ ಮತ್ತು ಪಠ್ಯವಾಚನದ ಕುರಿತು - ತರಬೇತಿ ಶಿಬಿರ | ಗುಲ್ಬರ್ಗಾ | 18.08.2016 ರಿಂದ 22.08.2016 | 5 | 40 |

| | | | | | |
|---|---|---|---|---|---|
| 4 | ಅಭಿಜಾತ ಕನ್ನಡ ಮತ್ತು ಪಠ್ಯವಾಚನದ ಕುರಿತು - ತರಬೇತಿ ಶಿಬಿರ | ಬೆಳಗಾಂ | 19.09.2016 ರಿಂದ 23.09.2016 | 5 | 40 |
| 5 | ಕನ್ನಡ ರಾಜ್ಯೋತ್ಸವದ ಆಚರಣೆ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 08.11.2016 | 1 | - |
| 6 | ಅಭಿಜಾತ ಕನ್ನಡ ಮತ್ತು ಪಠ್ಯವಾಚನದ ಕುರಿತು - ತರಬೇತಿ ಶಿಬಿರ | ಬಸರೂರು, ಉಡುಪಿ | 19.11.2016 ರಿಂದ 23.11.2016 | 5 | 40 |
| 7 | ಅಭಿಜಾತ ಕನ್ನಡ ಮತ್ತು ಪಠ್ಯವಾಚನದ ಕುರಿತು - ತರಬೇತಿ ಶಿಬಿರ | ಚಿಕ್ಕಬಳ್ಳಾಪುರ | 23.01.2017 ರಿಂದ 27.01.2017 | 5 | 40 |
| 8 | ಅಭಿಜಾತ ಕನ್ನಡ ಮತ್ತು ಪಠ್ಯವಾಚನದ ಕುರಿತು - ತರಬೇತಿ ಶಿಬಿರ | ಚಾಮರಾಜನಗರ | 16.02.2017 ರಿಂದ 21.02.2017 | 5 | 40 |
| 9 | ಮುನ್ನೋಟ ಕಮ್ಮಟ ಹಾಗೂ ಯೋಜನೆಗಳ ಸಿದ್ಧತೆ : ಭಾಗ- 1 | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 27.02.2017 | 1 | 50 |
| 10 | ಮುನ್ನೋಟ ಕಮ್ಮಟ ಹಾಗೂ ಯೋಜನೆಗಳ ಸಿದ್ಧತೆ : ಭಾಗ - 2 | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 28.02.2017 | 1 | 50 |

## 1ನೇ ಏಪ್ರಿಲ್ 2017 ರಿಂದ 31ನೇ ಮಾರ್ಚ್ 2018 ರವರೆಗೆ

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|

| | | | | | |
|---|---|---|---|---|---|
| 1 | ಶಾಸ್ತ್ರೀಯ ಕನ್ನಡ ಓದಿನ ಬಗೆಗಳು ಕುರಿತು ತರಬೇತಿ ಶಿಬಿರ | ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ | 1-06-2017 ರಿಂದ 5-06-2017 | 5 | 40 |
| 2 | ಶಾಸ್ತ್ರೀಯ ಕನ್ನಡ ಅಧ್ಯಯನದ ಸಾಧ್ಯತೆಗಳು | ಮೈಸೂರು | 17-08-2017 ರಿಂದ 21-08-2017 | 5 | 50 |
| 3 | ಅಭಿಜಾತ ಕನ್ನಡ ಪಠ್ಯವಾಚನ ಶಿಬಿರ | ಕೋಲಾರ | 29-08-2017 ರಿಂದ 02-09-2017 | 5 | 40 |
| 4 | ಅಭಿಜಾತ ಕನ್ನಡ ಪಠ್ಯವಾಚನ ಶಿಬಿರ | ಚಿತ್ರದುರ್ಗ | 6-9-2017 ರಿಂದ 10-09-2017 | 5 | 40 |
| 5 | ಅಭಿಜಾತ ಕನ್ನಡ ಪಠ್ಯವಾಚನ ಶಿಬಿರ | ಬೀದರ್ | 09-09-2017 ರಿಂದ 13-09-2017 | 5 | 40 |
| 6 | 83 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ - ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ವತಿಯಿಂದ ಮಳಿಗೆ ಪ್ರದರ್ಶನ | ಮೈಸೂರು | 24.11.2017 ರಿಂದ 26.11.2017 | 3 | |
| 7 | 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಭಾರತೀಯ ಭಾಷೆಗಳ ವ್ಯಾಕರಣ ಪರಂಪರೆ ಮತ್ತು ಆಧುನಿಕ ಪ್ರಕ್ರಿಯೆ | ಧಾರವಾಡ | 7.11.2017 ರಿಂದ 8.11.2017 | 2 | 40 |
| 8 | ಕನ್ನಡ ರಾಜ್ಯೋತ್ಸವದ ಆಚರಣೆ | ಮೈಸೂರು | 28.11.2017 | 1 | 400 |

| | | | | | |
|---|---|---|---|---|---|
| 9 | ಶಾಸ್ತ್ರೀಯ ಕನ್ನಡ ಪಠ್ಯಗಳ ಅಧ್ಯಯನ ಶಿಬಿರ | ಮಂಡ್ಯ | 10.01.2018 ರಿಂದ 14.01.2018 | 5 | 40 |
| 10 | ರೆವರೆಂಡ್ ಎಫ್. ಕಿಟಲ್ ಹಾಗೂ ಆರ್. ನರಸಿಂಹಾಚಾರ್ ಅವರ ಕುರಿತು ನುಡಿ ನಮನ ಕಾರ್ಯಕ್ರಮ | ಬೆಳಗಾವಿ | 02.02.2018 | 1 | 100 |
| 11 | ಫ. ಗು. ಹಳಕಟ್ಟಿ ಹಾಗೂ ಡಾ. ಎಲ್. ಬಸವರಾಜು ಅವರ ಕುರಿತು ನುಡಿ ನಮನ ಕಾರ್ಯಕ್ರಮ | ಹುನಗುಂದ, ಬಾಗಲಕೋಟೆ | 05.02.2018 | 1 | 100 |
| 12 | ಶಾಸ್ತ್ರೀಯ ಕನ್ನಡ ಪಠ್ಯಗಳ ಅಧ್ಯಯನ ಶಿಬಿರ | ಕೊಡಗು | 16.02.2018 ರಿಂದ 20.02.2018 | 5 | 40 |
| 13 | ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಹೊಸ ಆವರಣದ ಉದ್ಘಾಟನಾ ಕಾರ್ಯಕ್ರಮ | ಭಾರತೀಯ ಭಾಷಾ ಸಂಸ್ಥಾನ, ಮೈಸೂರು | 19-02-2019 | 1 | |
| 14 | ಶಾಸ್ತ್ರೀಯ ಕನ್ನಡ ಪಠ್ಯಗಳ ಅಧ್ಯಯನ ಶಿಬಿರ | ಬಳ್ಳಾರಿ | 19.02.2018 ರಿಂದ 23.02.2018 | 5 | 40 |

## 1ನೇ ಏಪ್ರಿಲ್ 2018 ರಿಂದ 31ನೇ ಮಾರ್ಚ್ 2019 ರವರಗೆ

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಕನ್ನಡ ಸಾಹಿತ್ಯ : ಅಧ್ಯಯನದ ಸವಾಲುಗಳು ಮತ್ತು ಸಾಧ್ಯತೆಗಳು | ಮೈಸೂರು | 4.7.2018 ರಿಂದ 6.7.2018 | 3 | 35 |
| 2 | ರಾಜ್ಯ ಮಟ್ಟದ ಶಾಸ್ತ್ರೀಯ ಕನ್ನಡ ಪಠ್ಯಗಳ ಅನುವಾದ ಕಮ್ಮಟ | ಮೈಸೂರು | 8.10.2018 ರಿಂದ 12.10.2018 | 5 | 60 |
| 3 | ಕನ್ನಡ ರಾಜ್ಯೋತ್ಸವ | ಮೈಸೂರು | 16-11-2018 | 1 | 400 |

| | | | | | |
|---|---|---|---|---|---|
| 4 | ಕರ್ನಾಟಕ ಸಂಶೋಧನೆ: ಚರಿತ್ರೆ ಮತ್ತು ಇತ್ತೀಚಿನ ಬೆಳವಣಿಗೆಗಳು | ಶಿವಮೊಗ್ಗ | 27.11.2018 ರಿಂದ 29.11.2018 | 3 | 60 |
| 5 | ಶಾಸ್ತ್ರೀಯ ಕನ್ನಡ ಪಠ್ಯಗಳ ಅನುಸಂಧಾನ ಕಮ್ಮಟ | ಕಲಬುರಗಿ | 13-02-2019 ರಿಂದ 17-02-2019 | 5 | 60 |
| 6 | ಶಾಸ್ತ್ರೀಯ ಕನ್ನಡಕ್ಕೆ ಬಾಸೆಲ್ ಮಿಶನರಿಗಳ ಕೊಡುಗೆ - ಒಂದು ದಿನದ ವಿಚಾರ ಸಂಕಿರಣ | ಧಾರವಾಡ | 5-03-2019 | 1 | 54 |
| 7 | ಪ್ರಾಚೀನ ಕನ್ನಡ ಸಾಹಿತ್ಯದ ಶಿಸ್ತೀಯ ಅಧ್ಯಯನ - ಮೂರು ದಿನಗಳ ವಿಚಾರ ಸಂಕಿರಣ | ಧಾರವಾಡ | 12-3-2019 ರಿಂದ 14-3-2019 | 3 | 60 |
| 8 | ಕನ್ನಡ ಮಹಾಕಾವ್ಯಗಳು - ಲಿಖಿತ ಮತ್ತು ಮೌಖಿಕ ಪರಂಪರೆಯ ತೌಲನಿಕ ಅಧ್ಯಯನ - 5 ದಿನಗಳ ಕಮ್ಮಟ | ಮೈಸೂರು | 18-3-2019 ರಿಂದ 22-3-2019 | 5 | 60 |

## 1ನೇ ಏಪ್ರಿಲ್ 2019 ರಿಂದ 31ನೇ ಮಾರ್ಚ್ 2020 ರವರೆಗೆ

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಪ್ರೌಢಶಾಲಾ ಶಿಕ್ಷಕರಿಗಾಗಿ ಕನ್ನಡ ಪಠ್ಯ ಬೋಧನ ಮತ್ತು ತರಬೇತಿ ಕಾರ್ಯಾಗಾರ | ಬೀದರ್ | 11-06-2019 ರಿಂದ 15-06-2019 | 5 | 50 |
| 2 | ಪದವಿ ಪೂರ್ವ ಉಪನ್ಯಾಸಕರಿಗಾಗಿ ಕನ್ನಡ ಪಠ್ಯ ಬೋಧನೆ ಮತ್ತು ತರಬೇತಿ ದಿನಗಳ ಕಾರ್ಯಾಗಾರ | ಮೈಸೂರು | 01-07-2019 ರಿಂದ 05-07-2019 | 5 | 50 |
| 3 | ಕನ್ನಡ ಗ್ರಂಥ ಸಂಪಾದನೆ : ಹೊಸ ಚಿಂತನೆಗಳು 3 ದಿನಗಳ ವಿಚಾರ ಸಂಕಿರಣ | ಮಂಗಳೂರು | 06-08-2019 ರಿಂದ 08-08-2019 | 3 | 50 |
| 4 | ವಚನ ಸಾಹಿತ್ಯ : ಬಹುಶಿಸ್ತೀಯ ನೆಲೆ 5 ದಿನಗಳ ಕಾರ್ಯಾಗಾರ | ಬೆಂಗಳೂರು | 11-02-2020 ರಿಂದ 15-02-2020 | 5 | 50 |
| 5 | ಕೀರ್ತನ ಸಾಹಿತ್ಯ : ಮಾರ್ಗ ಮತ್ತು ದೇಸಿ | ಮೈಸೂರು | 24-02-2020 ರಿಂದ 28-02-2020 | 5 | 50 |

## 1ನೇ ಏಪ್ರಿಲ್ 2020 ರಿಂದ 31ನೇ ಮಾರ್ಚ್ 2021 ರವರಗೆ

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ಕನ್ನಡ ರಾಜ್ಯೋತ್ಸವ | ಮೈಸೂರು | 1-11-2020 | 1 | 350 |
| 2 | ಆಂತರಿಕ ಯೋಜನೆಗೆ ಸಂಬಂದಿಸಿದಂತೆ ಒಂದು ದಿನದ ಪುನರ್ಮನನ ಕಾರ್ಯಾಗಾರ | ಮೈಸೂರು | 18-2-2021<br>19-2-2021<br>2-3-2021<br>10-3-2021<br>11-3-2021<br>12-3-2021 | 5 | - |
| 3 | ಉಲಿಯಾ ಉಯಲೆ - ಕ್ಲಾಸಿಕಲ್ ಕನ್ನಡದ AIR-FM100.6 13 ಸರಣಿ ಕಾರ್ಯಕ್ರಮಕ್ಕಾಗಿ ಸ್ಕ್ರಿಪ್ಟ್ ಬರವಣಿಗೆಯ ಕುರಿತು 2 ದಿನಗಳ ಕಾರ್ಯಾಗಾರ | ಮೈಸೂರು | 16-3-2021 & 17-3-2021 | 2 | |
| | | | | | |

1ನೇ ಏಪ್ರಿಲ್ 2021 ರಿಂದ 6 ಸೆಪ್ಟಂಬರ್ 2021 ರವರಗೆ

| ಕ್ರ. ಸಂ. | ಕಾರ್ಯಕ್ರಮದ ಹೆಸರು | ಸ್ಥಳ | ದಿನಾಂಕ | ಒಟ್ಟು ದಿನಗಳು | ಶಿಬಿರಾರ್ಥಿಗಳ ಸಂಖ್ಯೆ |
|---|---|---|---|---|---|
| 1 | ವೆಬಿನಾರ್ - ಅಕ್ಕನ ವಚನಗಳು | | 30-07-2021 | 1 | |
| 2 | ಉಪನ್ಯಾಸ ಸರಣಿ - ಭಕ್ತಿ ಬಹು ಅಭಿವ್ಯಕ್ತಿ | | 02-08-2021 to 06-09-2021 | | |

# Internal Projects

**Allotment of Topics to all the Senior / Associate Fellows of CESCK w.e.f. July 2018-19 (all these projects are under process)**

| lo. | Topics allotted |
|---|---|
| | Jannana Yashodara Charite: Cultural Dictionary |
| | Study of Old Kannada Literature through Kannada Literary History |
| | Rannana Gadayudda: Cultural Dictionary |
| | Maleya Mahadeshwara Kavya: Cultural Dictionary |
| | Survey of Studies in Vachana Literature |
| | Literary theory of Vachana Literature |
| | Unusual characteristics of Kannada Grammar in Keshi Raja's Shabdhamani Darpana |
| | Vaddaradhane Kannada to Telugu Translation |
| | Buddhist Philosophy in Vachana Literature |
| | Nature Metaphors in Vachana Karthees Vachanas |

## Internal Projects

# Allotment of Topics to all the Senior / Associate Fellows of CESCK w.e.f. Jan. 2021

| Sl.No. | Topics allotted |
|---|---|
| 1 | Kannada Bhakti Parampare: Tatvika Nelegalu (Kannada Bhakti Tradition: Philosophical Bases) |
| 2 | Kannada Shasanagallalli Bhaktiya Swaroopa (Kannada Bhakti Tradition in inscriptions) |
| 3 | Kannada Bhakti Parampare mattu Nadu Kannada Kavya Parampare (Kannada Bhakti Tradition and the legacy of poetry in Middle Kannada) |
| 4 | Kannada Bhakti Parampare mattu Suphi mattu Tatvapada (Kannada Bhakti Tradition and Sufi and Principle |
| 5 | Kannada Bhakti Parampare mattu Janapada Aacharane (Kannada Bhakti Tradition and Folk Ritual |
| 6 | Kannada Bhakti Parampare mattu cinema (Kannada Bhakti Tradition and Cinema) |
| 7 | Kannada Bhakti Parampare mattu Rangabhoomi (Kannada Bhakti Tradition and Theatre) |
| 8 | Kannada Bhakti Parampare mattu Charitre (Kannada Bhakti Tradition and History) |
| 9 | Kannada Bhakti Parampare mattu Dharma (Kannada Bhakti Tradition and Dharma |
| 10 | Kannada Bhakti Parampare mattu Janapada Aaradhane (Kannada Bhakti Tradition and Folk Workship |
| 11 | Kannada Bhakti Parampare mattu Sangeeta (Kannada Bhakti Tradition and Music) |
| 12 | Kannada Bhakti Parampare mattu Nruthya (Kannada Bhakti Tradition and Dance) |
| 13 | Kannada Bhakti Parampare mattu Vachana-Keerthana Sahitya (Kannada Bhakti Tradition and Vachana & Keerthana Literature) |
| 14 | Kannada Bhakti Parampare mattu Shilpakale (Kannada Bhakti Tradition and Sculpture) |
| 15 | Kannada Bhakti Parampare mattu Champu Kavya (Kannada Bhakti Tradition and Champu Kavya) |

## External Projects

| l No. | Title of the Project | Name of the Scholar | Remarks |
|---|---|---|---|
| | Vaddaaradane: Editing of Research Articles | Dr. Taltaje Vasanth Kumar<br>Dr. Vishnubhat Padekallu | Project Submitted and process for printing for publication |
| | Searchable online Scanned Kannada-English Dictionary by Rev. F. Kittel | Dr. Gilben Herut | Successfully uploaded to www.shastriyakannada.org website |
| | Kabbigarakava - Translation to English | Dr. Sujatha Reddy | Book under process |